Regd No M 1299 34 th Year ತಾ। 22--8--51

SATYAVADI

ಸಂಪಾದಕರು- ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಪತ್ರಿಕಾ ಸಂಮೇಳನ

ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಬೆಳಿಗ್ಗೆ ಕರೆದಿದ್ದ ಪತ್ರಿಕಾ ಸಂಮೇಳನದಲ್ಲಿ ಮೈಸೂರು ಕಾಂಗ್ರೆಸ್ ಮಹಾ ಚುನಾವಣೆಯಲ್ಲಿ ಶೇಕಡ 70-80 ಸ್ಥಾನ ಪಡೆವುದೆಂದರು. ಹುರಿಯಾಳುಗಳನ್ನು ಕೋಮು ಭಾವನೆ ಇಲ್ಲದೆ ನಿಲ್ಲಿಸಲಾಗಿವದೆಂದರು. ತಾಂಡನ್-ನೆಹರು ವಿವಾದವಲ್ಲಿ ಮೈಸೂರು ಕಾಂಗ್ರೆಸ್ ಪ್ರವೇಶಿಸುವದಿಲ್ಲವೆಂದರು ಚುನಾವಣಾ ಪ್ರಚಾರ ಕಾರ್ಯಕ್ಕೆ ಎನ್ನಿಲಕ್ಷ ರೂ ಬೇಕಿರುವದನ್ನು ವಿವರಿಸಿ ಜನತೆ ಉದಾರವಾಗಿ ಕೊಡಬೇಕೆಂದರು. ಅಲ್ಪ ಸಂಖ್ಯಾತರು, ವಿದ್ಯಾವಂತ ಹಿಳೆಯರಿಗೆ ಚುನಾವಣೆಯಲ್ಲಿ ಯುಕ್ತ ಪ್ರಾತಿನಿಧ್ಯ ವಿರುವದೆಂದರು.

ಮುಕ್ತಿ ಭಾಷಣದಿಂದ

ಪಿಲಾಂಗಿನಲ್ಲಿ ಮೊನ್ನೆ ನೇರಿದ್ದ ಬಹಿರಂಗ ಸಭೆಯಲ್ಲಿ ಸಚಿವ ಶ್ರೀ ಮುಕ್ತಿ ಭಾಷಣ ಮಾಡುತ್ತಾ, ಪಾಕಿಸ್ತಾನಕ್ಕೆ ಭಾರತದ ಒಂದಂಗುಲ ನೆಲವನ್ನೂ ಬಿಟ್ಟುಕೊಡೆವು ಎಂದರು. ಭಾರತದ ಮೇಲೆ ಧಾಳಿ ಆದರೆ ಅದನ್ನು ಸಂಘಟನೆ ಇಂದ ಎದುರಿಸಲಾಗುವದೆಂದರು ದಿನ ಕಳೆದಂತೆಲ್ಲ ಪಾಕ್‌ನ ಸರ್ಕಾರ ಕೂಗು ನಿಲ್ಲುವದೆಂದರು.

ಗೋಪಾಲ್ ಹೇಳಿಕೆ

ವೈಯಕ್ತಿಕ ಅಥವಾ ಸಾಮಾಜಿಕ ಸ್ವರೂಪದ ಯಾವುದೇ ಭಯೋತ್ಪಾದಕ ಚಟುವಟಿಕೆಗೆ ಕಮ್ಯುನಿಸ್ಟ್ ಪಕ್ಷವು ವಿರೋಧವಾಗಿದೆಯೆಂದು ಹಿಂದೂಸ್ತಾನ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಚುನಾವಣಾ ಮಂಡಳದ ಸದಸ್ಯರಾದ ಶ್ರೀ ಎ. ಕೆ. ಗೋಪಾಲರವರು ಗೃಹಮಂತ್ರಿ ಶ್ರೀ ರಾಜಾಜಿಯವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಕ್ಕೆ ಉತ್ತರರೂಪ ಹೊರಡಿಸಿದ ಪ್ರಕಟಣೆಯಲ್ಲಿ ಹೇಳಲಾಗಿದೆ.

ದಿವ್ಯವಾಣಿ

ಸ್ವಾರ್ಥದಲ್ಲಿ ಮುಗ್ನರಾದಷ್ಟೂ ಸ್ವಾರ್ಥದ ತೃಷೆ ಹೆಚ್ಚುವುದು ಆದ್ದರಿಂದಲೇ ಸ್ವಾರ್ಥಿಯಷ್ಟು ಅಸಂತುಷ್ಟ ಬೇರಾರೂ ಇಲ್ಲ — ಫ್ರಾಯ್ಡ್‌ಲಿಕ್

ಮೊನ್ನೆ ಮೈಸೂರಿನ ಭಾರತ ರೇಡಿಯೋದಿಂದ ವಿದ್ಯುತ್ ಮಗ್ಗ ಗೃಹ ಕೈಗಾರಿಕೆ ಎಂಬ ವಿಷಯವಾಗಿ ಸಚಿವ ಶ್ರೀ ಕೆ. ಟಿ ಭಾಷ್ಯಂ ಭಾಷಣ ಮಾಡುತ್ತಾ, ಮೈಸೂರು ಸುಲಭವಾಗಿ ಸ್ವಿಡ್ಸರ್ಲೆಂಡ್ ಆಗಬಹುದೆಂದರು.

ತಾವ್ಯಾವ ಪ್ರಯತ್ನವನ್ನೂ ಕಾಶ್ಮೀರ ವಿವಾದ್ಯಸ್ಥಿಕೆ ಬಗೆಗೆ ಮಾಡಿಲ್ಲವೆಂದು ಅರಬ್ ಲೀಗಿನ ಕಾರ್ಯದರ್ಶಿ ಅಜಮ್‌ಪಾಶಾರವರ ಕೈರೋದಲ್ಲಿ ತಿಳಿಸಿದ್ದಾರೆ.

ಮೈಸೂರು ಸರ್ಕಾರ ಸಂಸ್ಥಾನದ ಜಾನುವಾರುಗಳ ಜಲೈ ತಿಂಗಳ ಆರೋಗ್ಯ ಪ್ರಗತಿ ಕುರಿತು ಪ್ರಕಟಣೆ ಇತ್ತಿದೆ.

ಕನ್ನಡ ನಾಡಿನ ಇಳಕಲ್ಲದಲ್ಲಿ ಕಳೆದ ತಿಂಗಳು ಕೊನೆಯಲ್ಲಿ ಹುಚ್ಚಪ್ಪಾ ಶಿವರಾಯಪ್ಪ ದೇಸಾಯಿ ಎಂಬ ಪೋಲೀಸ ನಿಗೆ ಲಂಚ ನಿರ್ಮೂಲನ ಅಧಿಕಾರಿಗಳು ರಹಸ್ಯ ವೇಷದಲ್ಲಿ ಬಂದು ಲಂಚ ಕೊಟ್ಟು ಕೆಲಸ ಮಾಡಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಅವನು ಲಂಚವನ್ನ ತೆಗೆದುಕೊಳ್ಳದಿದ್ದರಿಂದ ಅವರು ತಮ್ಮ ವೇಷವನ್ನು ಬಿಟ್ಟುಗೊಟ್ಟು ಪೋಲೀಸನ ಬಗ್ಗೆ ಅಭಿಮಾನ ತೋರಿದರು.

ಸರ್ಕಾರಿ ಗಿರಣಿ ಬಟ್ಟೆ ಹಂಚುವ ಬಗೆಗೆ ಇರುವ ದೋಷವನ್ನು ಪ್ರತಿಭಟಿಸುವ ಸಲುವಾಗಿ ಬೊಂಬಾಯಿ ಕಿರುಕುಳ ಬಟ್ಟೆ ವ್ಯಾಪಾರಿ ಸಂಘದ ಸದಸ್ಯರಾದ ಶ್ರೀ ಅಮರಸಿ ಮುಲಜಿ ನಥವಾಸೆ ಎಂಬವರು ಮೊನ್ನೆ ಬೊಂಬಾಯಿ ಶಾಸನ ಸಭೆ ಎದುರು ಉಪವಾಸ ಆರಂಭಿಸಿದರು.

ಪಾಕಿಸ್ತಾನಕ್ಕೆ ಅರಬ್ ಸೇನೆಯ ಸಹಾಯವಿಲ್ಲ !

ನವದೆಹಲಿ — ಮಹಾತ್ಮ ಗಾಂಧಿ ಹಾಗೂ ಪಂ|| ನೆಹರೂರ ಬಗ್ಗೆ ಮತ್ತು ಭಾರತದ ಆದರ್ಶಗಳ ಒಗ್ಗೆ ಈಜಿಪ್ಟದ ಜನರಿಗೆ ಅತ್ಯಂತ ಗೌರವಾದರಗಳಿರುವದರಿಂದ ಕಾಶ್ಮೀರ ಪ್ರಶ್ನೆಯ ಬಗೆಗೆ ಈಜಿಪ್ಟದ ಬಹು ಸಂಖ್ಯಾಕ ಜನರು ತಟಸ್ಥರಾಗಿ ಉಳಿದಿರುವರೆಂದು ಅಂಬ್ ಲೀಗಿನ ಪ್ರಧಾನ ಕಾರ್ಯದರ್ಶಿ ಅಜ್ಜಂಪಾಶಾ ಅಭಿಪ್ರಾಯಪಟ್ಟಿರುವರೆಂದು ಇಲ್ಲಿಗೆ ಅಧಿಕೃತ ವರದಿ ಬಂದಿದೆ ಇದೇ ಅಭಿಪ್ರಾಯವನ್ನು ಲೆಬಾನನ್ ಅಧ್ಯಕ್ಷ, ವಿದೇಶ ಮಂತ್ರಿ, ಜೋರ್ಡಾನ್ ವಿದೇಶ ಸಚಿವ ಮತ್ತು ಸಿರಿಯದ ಪ್ರಧಾನಿ ವ್ಯಕ್ತ ಮಾಡಿರುವರು. ಪಾಕಿಸ್ತಾನಕ್ಕೆ ಅರಬ ರಾಜ್ಯಗಳು ಸೈನ್ಯ ಸಹಾಯ ನೀಡುವವೆಂಬ ವರದಿಗಳು ಹುಚ್ಚರ ತಾಕುಗಳಾಗಿರುವದೆಂದು ಜೋರ್ಡಾನಿನ ಹಿಂದಿನ ಅರಸು ಅಬ್ದುಲ್ಲಂವರು ಆ ವರದಿಯಲ್ಲಿ ಹೇಳಲಾಗಿದೆ.

ಪಾಕಿಸ್ತಾನಕ್ಕೆ ಸವಾಲ

ಕಲ್ಕತ್ತ — ಕಾಶ್ಮೀರ ಮುಸಲ್ಮಾನರ ಹಕ್ಕುಗಳ ರಕ್ಷಣೆಗಾಗಿ ಹೋರಾಡುತ್ತಿರುವದಾಗಿ ಹೆಸರಿಸಿಕೊಳ್ಳುತ್ತಿರುವ ಪಾಕಿಸ್ತಾನವು ವಾಯುವ್ಯ ಸರಹದ್ದು ಪ್ರಾಂತದಲ್ಲಿ ಫಕ್ತೂನಿಸ್ಥಾನದ ಬಗ್ಗೆ ಮತಗಣನೆ ನಡೆಸಿ ತನ್ನ ತತ್ವ ನಿಷ್ಠೆಯನ್ನು ಪ್ರದರ್ಶಿಸಲೆಂದು ಫಕ್ತೂನಬಿಗರ್ಖಾ-ಇ-ಹಿಂದದ ಅಧ್ಯಕ್ಷರಾದ ವಲಿಖಾನ್ ವಹಮದ ಅಕಬರ್ ಜಾನರು ಆಹ್ವಾನಿಸಿರುವರು.

ಬಂದ್ ಆಗಿದೆ

ಮೊನ್ನೆಯಿಂದ ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ ಬಂದಾಗಿದೆಯೆಂದು ತಿಳಿದುಬಂದಿದೆ.

ಎಚ್ಚರಿಕೆ

ಜಮಿಂದಾರ್ ಪತ್ರಿಕೆಯಲ್ಲಿ ಕೆಲವು ದಿನಗಳ ಕೆಳಗೆ ಪ್ರಕಟವಾಗಿದ್ದ ಕವನವೊಂದರ ಬಗ್ಗೆ ಪಶ್ಚಿಮ ಪಂಜಾಬಿನ ಪತ್ರಿಕಾ ಸಲಹಾ ಸಮಿತಿ, ಈ ರೀತಿ ಪ್ರಕಟವಾದರೆ ತೀವ್ರ ಕ್ರಮ ತೆಗೆದುಕೊಳ್ಳುವದಾಗಿ ಆ ಪತ್ರಿಕೆಗೆ ಎಚ್ಚರಿಸಿದೆ. ಕವನ ಭಾರತದ ವಿರುದ್ಧವಾಗಿತ್ತು

ಅಂಗೀಕೃತವಾಗಲಿ

ಭಾರತ ಸಚಿವ ಶ್ರೀ ಹರೇಕೃಷ್ಣನೆಂಹತಾಬ್ ಹೇಳಿಕೆಯಿತ್ತು ಪಂ|| ನೆಹರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಇತ್ತಿರುವ ರಾಜೀನಾಮೆ ಅಂಗೀಕೃತವಾಗುವುದೊಳ್ಳಿಯದೆಂದರು.

ಘಟಿಕೋತ್ಸವ ಭಾಷಣ

ಸಚಿವ ಶ್ರೀ ಸಿ. ರಾಜಗೋಪಾಲಾಚಾರಿಯವರು ಕಾಶ್ಮೀರ ವಿಶ್ವವಿದ್ಯಾನಿಲಯ ಘಟಿಕೋತ್ಸವ ಭಾಷಣ ಮಾಡುವರೆಂದು ಶ್ರೀನಗರ ಸುದ್ದಿ.

ನೆಹರೂಗೆ ಬೆಂಬಲ

ಗಯಾ ವಕೀಲ ಸಂಘ ಪಂ. ನೆಹರು ನಿಲುವಿಗೆ ಪೂರ್ಣ ಬೆಂಬಲ ಕೊಡುವ ನಿರ್ಣಯ ಮಾಡಿದೆ.

ಹನ್ನೊಂದು ಸಾವು

ಮೊನ್ನೆ ರಾತ್ರಿ ಪುಣೆ ಸನಿಹದಲ್ಲಿ ಭಾರತ ವಿಮಾನ ದಳದ ಪಡೆಯೊಂದು ತಳಗುರುಳಿ ಹನ್ನೊಂದು ಮಂದಿಯೂ ಸತ್ತರು.

ರಿಪೋರ್ಟರಿನಿಂದ

ವಿಶ್ವಸಂಸ್ಥೆ ವಾರ್ತೆಗಳನ್ನು 36 ಜನಾಂಗಕ್ಕೆ 890 ವಂದಿ ಪತ್ರಿಕೋದ್ಯೋಗಿಗಳು ವರದಿ ಮಾಡುತ್ತಾರೆಂದು ಅಮೇರಿಕ್ ರಿಪೋರ್ಟರ್ ತಿಳಿಸುತ್ತದೆ.

ಮೂರು ಲಕ್ಷ ಎಕ್ರೆ ಸಾಗಿಗೆ

1952 ನೇ ಡಿಸೆಂಬರಿನೊಳಗೆ ಗಂಗಾ ಕಾಲುವೆಗಳಲ್ಲಿ ಒಂದು ಸಾವಿರ ಕೊಳವಿ ಬಾವಿಗಳನ್ನು ಸ್ಥಾಪಿಸಿದೊಡನೆ ಮೂರು ಲಕ್ಷ ಎಕರೆ ಭೂಮಿ ವ್ಯವಸಾಯ ಮಾಡಲಾಗುವದೆಂದೂ ಇದು ಭಾರತ ಸರಕಾರದ ಹೆಚ್ಚು ಆಹಾರ ಬೆಳೆಯಿರಿ ಚಳವಳಿಯ ಕಾರ್ಯಕ್ರಮದ ಒಂದು ಭಾಗವೆಂದೂ ಹೇಳಲಾಗಿದೆ.

ಆರ್ನೂರು ಮಂದಿಗೆ ಅನ್ನ

ಮಧ್ಯಪ್ರಾಚ್ಯದಲ್ಲಿ ಒಬ್ಬ ಅಮೇರಿಕ ಸನ್ಯಾಸಿನಿ ಸಿಸ್ಟರ್ ಬ್ಯಾನ್ಸ್ ಎಂಬಾಕೆ ಇನ್ನೂರೆಪ್ಪತ್ತು ಎಕರೆ ಭೂಮಿಯನ್ನು ನೋಡಿಕೊಳ್ಳುತ್ತಿರುವಳೆಂದೂ, ಅದರಿಂದ ಆರ್ನೂರು ಮಂದಿಗೆ ಹೊಟ್ಟೆ ಪಾಡು ನಡೆಯುತ್ತಿರುವದೆಂದೂ ಪ್ರಕಟಿಸಲಾಗಿದೆ.

ತಿರುವಾಂಕೂರಿನಲ್ಲಿ ದೇವಾಲಯಗಳ ಮೇಲೆ ಧಾಳಿ

(ಮುಂದುವರಿದದ್ದು)

ಸಬರಿಮಾಲಾ ದೇವಾಲಯದ ಪ್ರತಿಮೆಯನ್ನು ಪುನಃ ಪ್ರತಿಷ್ಠಿಸಿದಾಗ, ಆ ಮೊದಲು ಒಡೆದು ಬಿದ್ದಿದ್ದ ಪಂಚಲೋಹ ವಿಗ್ರಹಗ ತುಂಡುಗಳನ್ನು ಕಂಗಿಸಿ ಬಿಡುವ ಸೂಚನೆಯ ಯತ್ನಗಳೂ ಕೆಲವರಿಂದ ನಡೆದಿದ್ದವು ಇದರಿಂದ ಏನೂ ಆದರ, ಕೆಲವರಲ್ಲಿ ಅಳಿಯದಂತಾಗಿದ್ದು ಏಂದೆಂಬುದೇ ಆ ಸೂಚನೆಯನ್ನು ತಿರಸ್ಕರಿಸಂತೆ ಮಾಡಿತು. ಆಮೇಲೆ, ಕೇಂದ್ರ ಸರಕಾರವು, ಸಬರಿಮಾಲಾ ಘಟನೆಗಳ ಕುರಿತಾದ ತನಿಖೆಯನ್ನು ವಾಪಸು ತೆಗೆದುಕೊಳ್ಳುವುದು ಜೀಡವೆಂದು, ತಿರುವಾಂಕೂರು —ಕೊಚ್ಚಿ ಸರಕಾರಕ್ಕೆ ತಿಳಿಸಿತು ಎಂಬುದಾಗಿ ಕೆಲವು ಸಂಜೆಯಾಳಿ ದೈನಿಕಗಳಲ್ಲಿ ಒಂದು ವಾರ್ತೆ ಪ್ರಕಟವಾಯಿತು. ಈ ವಂದಿಯು ಪ್ರಕಟವಾದ ನಂತರ ಪುಂಡರಿಗೆ ಪುನಃ ಹೊಸ ಹುರುಪು ಉಂಟಾದಂತೆ ತೋರುತ್ತದೆ. ಭಾರತ ಸರಕಾರವು ಮುಂದಿರಿದ್ದು, ಎಲ್ಲ ಮತೀಯರಿಗೆ ತಕ್ಕ ರಕ್ಷಣೆ ಕೊಡುವಂತೆ ಒಂದು ನಿರ್ಣಾಯಕ ವ್ಯವಸ್ಥೆ ಮಾಡಿಸಬೇಕಾಗಿ ತಿರುವಾಂಕೂರು—ಕೊಚ್ಚಿ ಸಂಸ್ಥಾನದ ಪ್ರಜೆಗಳ ಮತವಾಗಿದೆ.

ರಣಜಿತ್

ಅಮೋಘ 2 ನೇ ವಾರ

ಮಧುಬಾಲ, ಪ್ರೇಮನಾಥ್, ನಟಿಸಿರುವ

ಮನಮೋಹನ ಹಿಂದಿ ಚಿತ್ರ

ಬಾದಲ್ BADAL

ಪ್ರತಿದಿನ 3 ಪ್ರದರ್ಶನಗಳು

ಉಡ್‌ಲಾಂಡ್ಸ್ ತುಳಸಿ ವೃಂದ

24—8—51 ರಿಂದ

Soudagar ಸೌದಾಗರ್

ಪಾತ್ರ— ದೇವಾನಂದ, ಸಜೀವ್‌ಕುಮಾರ್, ಸೂರೈಯ ಚೌದರಿ, ಬಾಡ್ಡು ಅದ್ವಾನಿ

ಹಾಡುಗಳು — ಸಂತೋಷಿ ಸಂಗೀತ — ರಾವ ಚಂದ್ರ

ಸೊಗಸಾದ ಹಿಂದಿ ಚಿತ್ರ] [ಪ್ರತಿದಿನ 3 ಪ್ರದರ್ಶನಗಳು

OPERA Secrets of Life

Aug. 24 th MACBETH

(William Shakespeare's Play)

Starring— Orson Welle, Jeanette Nolan



ಅಮೇರಿಕಾ ಅಧ್ಯಕ್ಷ ಹ್ಯಾರಿ ಎಸ್ ಟ್ರೂಮ್ಯಾನ್

ಮತ್ತೊಂದು ಚಿತ್ರ ಅಮೇರಿಕೆ ವಿದೇಶಾಂಗ ಕಾರ್ಯದರ್ಶಿ

ಡೀನ್ ಅಚೆ



"ಗೋರಕ್ಷಣ"

ಕಾರ್ಯ ಎಲ್ಲೆಲ್ಲೂ ನಡೆಯಲಿ

Protect the Cow

Edited, Printed and Publishedby M. S. Krishna Rao
Satyavadi Press Chamrajpuram Mysore